**Witness duly sworn on 04.04.2026**

**further cross examination by Advocate for Respondent :**

ನಾನು ಪರಿಹಾರದ ಹಣವನ್ನು ಪಡೆದುಕೊಳ್ಳುವ ಸಲುವಾಗಿ (LAC. No. 28/2010) ನಮ್ಮ ವಕೀಲರಾದ ಸಿ.ಎಂ. ಜಗದೀಶ್ ರವರ ಮುಖಾಂತರ ಅಮಲ್ಜಾರಿ ಅರ್ಜಿ ನಂಬರ್ 299/2022 ಅನ್ನು ಸಲ್ಲಿಸಿದ್ದೆ ಎಂದರೆ ಸರಿ. ದಿನಾಂಕ 11.02.2023 ರ ಲೋಕಾದಲತ್ ನಲ್ಲಿ LAC. No. 28/2010 ರ ಬಾಕಿ ಪರಿಹಾರದ ಹಣವನ್ನು ಪಡೆದುಕೊಂಡು ಇನ್ನು ಮುಂದೆ ಯಾವುದೇ ಅಪೀಲು ಸಲ್ಲಿಸುವುದಿಲ್ಲ ಎಂದು ಹೇಳಿ ಜಾಯಿಂಟ್ ಮೆಮೋ ಸಲ್ಲಿಸಿದ್ದೆ ಎಂದರೆ ದುಡ್ಡು ಬರುತ್ತದೆ ಸಹಿ ಮಾಡು ಎಂದು ಹೇಳಿದ್ದರು ಅದಕ್ಕೆ ನಾನು ಸಹಿ ಮಾಡಿದ್ದೆ. ನಾನೂ ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ನೋಡಿ ಗುರುತಿಸಿದ ಸಹಿ ಉಳ್ಳ ದಾಖಲೆ LAC. No. 211/2005 ಅಮಲ್ಜಾರಿ ಅರ್ಜಿ ಸಂಖ್ಯೆ 299/2022 ದಲ್ಲಿ ಸಲ್ಲಿಸಿರಲುವ ಜಾಯಿಂಟಿ ಮೆಮೊ ಇದ್ದು ಅದನ್ನು **ನಿ.ಆರ್.1** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಆರ್.1(ಎ)** ಎಂದು ಗುರುತಿಸಲಾಯಿತು. ನನಗೆ ಬರಬೇಕಾಗಿದ್ದ 35,00,000/- ರೂ ಹಣವನ್ನು ನಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಪಡೆದುಕೊಂಡಿರುತ್ತೇನೆ. ನಾನು LAC.No.28/2010 ರ ಅರ್ಜಿಯಲ್ಲಿ ನಮ್ಮ ಜಮೀನನ್ನು ಸರ್ಕಾರದವರು ಸ್ವಾಧೀನ ಪಡಿಸಿಕೊಂಡಿದ್ದರಿಂದ ಬರಬೇಕಾಗಿದ್ದ ಪರಿಹಾರದ ಹಣವನ್ನು ಅಮಲ್ಜಾರಿ ಅರ್ಜಿ ಸಂಖ್ಯೆ 299/2022 ರಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅದನ್ನು ಬಿಟ್ಟು ಬೇರೆಯವರ ಜಮೀನಿಗೆ ಸಂಬಂಧಪಟ್ಟಂತೆ ಪರಿಹಾರವನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ನಿ.ಆರ್.1 ರಲ್ಲಿ ಹೇಳಿರುವಂತಹ 35,00,000/- ರೂ ಹಣವನ್ನು ನ್ಯಾಯಾಲಯದಿಂದ ಪಡೆದುಕೊಳ್ಳುವಾಗ ಈ ಹಣ ನನಗೆ ಸೇರಿದ್ದಲ್ಲ ಎಂದು ಹೇಳಿ ನ್ಯಾಯಾಲಯಕ್ಕೆ ಪುನಃ ಅರ್ಜಿ

ಸಲ್ಲಿಸಿರುವುದಿಲ್ಲ. ನಾನು ನಿ.ಆರ್1 ರಲ್ಲಿ ಹೇಳಿರುವಂತಹ ಹಣ ನನ್ನ ಆಸ್ತಿಯನ್ನು ಸರ್ಕಾರದವರು ವಶಪಡಿಸಿಕೊಂಡಿರುತ್ತಾರೆ ಎಂದು ಹೇಳಿ ಆ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿ.ಆರ್. 1 ಕ್ಕೆ ನಾನು ಸಹಿ ಮಾಡುವಾಗ LAC.No.28/2010 ರಲ್ಲಿ ಹಣ ಬರುತ್ತದೆ ಎಂದು ಹೇಳಿ ನಾನು ಸಹಿ ಮಾಡಿದ್ದೆ ಎಂದರೆ ಹಣ ಬರುತ್ತದೆ ಸಹಿ ಮಾಡು ಎಂದು ಹೇಳಿದ್ದರು ನಾನು ಸಹಿ ಮಾಡಿದ್ದೆ.

ಅಪೀಲನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆ. ನಾನು ಮಾಹಿತಿ ಕೊಟ್ಟ ಮೇಲೆ ನಮ್ಮ ವಕೀಲರು ಅದನ್ನು ಬರೆದು ಓದಿ ಹೇಳಿದ ಮೇಲೆ ಸಹಿ ಮಾಡುತ್ತೇನೆ ಎಂದರೆ ನಮ್ಮ ವಕೀಲರು ನನಗೆ ಓದಿ ಹೇಳಿರಲಿಲ್ಲ. ಪ್ರಸ್ತುತ ಅಪೀಲನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಯನ್ನು ಕೊಟ್ಟಿದ್ದೆ. ನಾನು ಮಾಹಿತಿ ಕೊಟ್ಟ ಮೇಲೆ ಅಪೀಲನಲ್ಲಿ ಇರುವ ಮಾಹಿತಿಯನ್ನು ಓದಿ ಹೇಳಿದರು ಎಂದರೆ ಸರಿ.

ಅಪೀಲಿನೊಂದಿಗೆ ಮಧ್ಯಂತರ ಅರ್ಜಿ (ಕಾಲ ವಿಳಂಭ) ಮತ್ತು ಅದರೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ನನಗೆ ಓದಿ ಹೇಳಿದ ಮೇಲೆ ನಾನು ಅರ್ಥ ಮಾಡಿಕೊಂಡು ಸಹಿ ಮಾಡಿದ್ದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಪಕ್ಕದ ಜಮೀನಿನವರಿಗೆ ಹೆಚ್ಚಿನ ಪರಿಹಾರ ಬಂದಿರುತ್ತದೆ ನನಗೂ ಸಹ ಹೆಚ್ಚಿನ ಪರಿಹಾರ ಬರಬೇಕಾಗಿರುತ್ತದೆ ಎಂದು ಹೇಳಿರುವ ಕಾರಣ ಬಿಟ್ಟರೇ ಬೇರೆ ಕಾರಣ ಹೇಳಿರಲಿಲ್ಲ ಎಂದರೆ ಸರಿ. ನಾನು ನನ್ನ ಅಪೀಲು ಮೆಮೊದಲ್ಲಿ ಅಮಲ್ಜಾರಿ ಅರ್ಜಿ ನಂಬರ್ 299/2022 ಅನ್ನು ಸಲ್ಲಿಸಿ ಪರಿಹಾರವನ್ನು ಪಡೆದುಕೊಂಡಿರುತ್ತೇನೆ ಎನ್ನುವ ವಿಷಯವನ್ನು ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಸಾಕ್ಷಿದಾರರಿಗೆ ಎದುರುದಾರರ ಪರ ವಕೀಲರು ನನ್ನ ಅಪೀಲಿನಲ್ಲಿ ದಿನಾಂಕ 11.02.2023 ರಂದು ಲೋಕಾದಲತ್ ನಲ್ಲಿ ಜಾಯಿಂಟ್ ಮೆಮೊ ಸಲ್ಲಿಸಿ ಪರಿಹಾರವನ್ನು ಪಡೆದುಕೊಂಡಿದ್ದೆ ಎನ್ನುವ ವಿಷಯವನ್ನು ತಿಳಿಸಲು ಏನಾದರೂ ತೊಂದರೆ ಇತ್ತಾ ಎಂದು ಪ್ರಶ್ನೆ ಹಾಕಿದ್ದು ಅದಕ್ಕೆ ಸಾಕ್ಷಿದಾರರು ರಾಜೀ ಮಾಡಿಕೊಂಡಿರುವುದಿಲ್ಲ ಹಣ ಬರತ್ತೆ ಸಹಿ ಮಾಡು ಎಂದು ಹೇಳಿದ್ದರು ಅದಕ್ಕೆ ನಾನು ಸಹಿ ಮಾಡಿದ್ದೆ. ನಾನು ರಾಜೀ ಮಾಡಿಕೊಂಡಿರುವುದಿಲ್ಲ ಹಣ ಬರುತ್ತೆ ಸಹಿ ಮಾಡು ಎಂದು ಹೇಳಿದರು ಅದಕ್ಕೆ ನಾನು ಸಹಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 11.02.2023 ರಂದು ನಾನು ನ್ಯಾಯಾಲಯಕ್ಕೆ ಹೋಗಿದ್ದೆ. ಲೋಕಾದಲತ್ ನಲ್ಲಿ ನಾನು, ನನ್ನ ವಕೀಲರು, ಎದುರುದಾರ, ಎದುರುದಾರರ ವಕೀಲರು ಹಾಜರಿದ್ದು ನ್ಯಾಯಾಧೀಶರ ಮುಂದೆ ನಿ.ಆರ್.1 ಕ್ಕೆ ನಿ.ಆರ್.1(ಎ) ಎಂದು ಸಹಿ ಮಾಡಿದ್ದೆ ಎಂದರೆ ಸರಿ. ನನಗೆ ಅಲ್ಲಿ ನಿ.ಆರ್.1 ಅನ್ನು ಓದಿ ಹೇಳಿದ ಮೇಲೆ ನಾನು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನನಗೆ ನಿ.ಆರ್.1 ಅನ್ನು ಓದಿ ಹೇಳಿದ ಮೇಲೆ ಸಹಿ ಮಾಡಿದ್ದು ಹೆಚ್ಚಿನ ಪರಿಹಾರ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಕೀಲರು ಬರೆದಂತಹ ಜಂಟಿ ಮೆಮೋ ಗೆ ನಾನು ಸಹಿ ಮಾಡಿದ್ದೆ ಎಂದರೆ ನಮ್ಮ ವಕೀಲರು ದುಡ್ಡು ಬರುತ್ತದೆ ಸಹಿ ಮಾಡು ಎಂದು ಹೇಳಿದ್ದರು ಅದಕ್ಕೆ ಸಹಿ ಮಾಡಿದ್ದೆ. ನಾನು ದಿನಾಂಕ 11.02.2023 ರಂದು ಲೋಕಾದಲತ್ ನಲ್ಲಿ ಎಲ್ಲಾ ಪರಿಹಾರವನ್ನು ಪಡೆದುಕೊಂಡಿದ್ದರು ಸಹ ನಮ್ಮ ಪಕ್ಕದ ಜಮೀನಿನವರು ಹೆಚ್ಚಿನ ಪರಿಹಾರ ಪಡೆದುಕೊಂಡಿರುತ್ತಾರೆ ಎಂದು ಹೇಳಿ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ದಿನಾಂಕ 11.02.2023 ರಿಂದ ಈ ಅಪೀಲು ಸಲ್ಲಿಸುವವರೆಗೆ ಕೂಡಲೇ ಮೇಲ್ಮನವಿ ಸಲ್ಲಿಸಲು ನನಗೆ ಹಣದ ತೊಂದರೆ ಇತ್ತು. ನನಗೆ ಹಣದ ತೊಂದರೆ ಇತ್ತು ಎನ್ನುವುದನ್ನು ಮೇಲ್ಮನವಿ ಸಲ್ಲಿಸಲು ಸೃಷ್ಟಿಸಿಕೊಂಡ ಕಾರಣ ಇರುತ್ತದೆ ಎಂದರೆ ಸರಿಯಲ್ಲ. ನಾನು LAC.No.

28/2010 ರಲ್ಲಿ ಆದಂತಹ ಎಲ್ಲಾ ಪರಿಹಾರದ ಹಣವನ್ನು ಪಡೆದುಕೊಂಡಿರುವುದರಿಂದ ಈ ಅಪೀಲು ಸಲ್ಲಿ ಸಲು ಯಾವುದೇ ಸಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**TYPED TO MY DICTATION IN THE OPEN COURT.**

***R. O. I. & A. C.,***

***IV ADJ.,***
***MYSORE.***